# ನನ್ನಲ್ಲಿರುವ ನಟನೆ ನನಗಿಷ್ಟ

## ನೊಣವಿನಕರೆ ರಾಮಕೃಷ್ಣಯ್ಯ

**ಕಲರ್ಸ್ ಕನ್ನಡದ 'ಕುಲವಧು'ವಿನ ಅಜ್ಜಯ್ಯ**

★ *ರಂಗಭೂಮಿಯ ನಂಟು ಬೆಸೆದಿದ್ದು ಹೇಗೆ?*

ಐಟಿಐ ಕಾರ್ಖಾನೆಯಲ್ಲಿ ಅಧಿಕಾರಿಯಾಗಿ ನಿವೃತ್ತನಾಗಿದ್ದೇನೆ. ಕೆಲಸದಲ್ಲಿದ್ದಾಗ ಅಲ್ಲಿಯ ಲಲಿತ ಕಲಾ ಸಂಘದಲ್ಲಿ ಸಕ್ರಿಯನಾಗಿದ್ದೆ. ದೀರ್ಘಕಾಲ ಸಂಘದ ಕಾರ್ಯದರ್ಶಿಯೂ ಆಗಿದ್ದೆ. ಅನೇಕ ನಾಟಕ ಸ್ಪರ್ಧೆಗಳಲ್ಲಿ ನಮ್ಮ ತಂಡ ನಾಟಕ ಪ್ರದರ್ಶಿಸಿದೆ. 25ಕ್ಕೂ ಹೆಚ್ಚು ರೇಡಿಯೋ ನಾಟಕಗಳನ್ನು ಬರೆದು ಆಡಿಸಿದ್ದೇನೆ. ಹಲವಾರು ಲೇಖನಗಳನ್ನು ಆಕಾಶವಾಣಿಯಿಂದ ಪ್ರಸ್ತುತ ಪಡಿಸಿದ್ದೇನೆ. ಇದರ ಜೊತೆ ಹಾಸ್ಯ ಪ್ರಬಂಧ, ಕವಿತೆಗಳನ್ನೂ ಬರೆಯುತ್ತೇನೆ. ನಟ ರಾಜಕುಮಾರ್ ನನ್ನನ್ನು ತುಂಬಾ ಪ್ರಭಾವಿಸಿದರು. ಇದು ನನ್ನ ರಂಗಚಟುವಟಿಕೆಯನ್ನು ಹೆಚ್ಚಿಸಿತು. ಸಿ.ಆಶ್ವತ್ಥ್, ಬಿ.ಎಸ್.ರಾಮಸ್ವಾಮಿ, ಸಿ.ಆರ್.ಸಿಂಹ, ಮಾಸ್ಟರ್ ಹಿರಣ್ಣಯ್ಯ ಮೊದಲಾದ ರಂಗಕರ್ಮಿಗಳ ಒಡನಾಟ ಮತ್ತಷ್ಟು ರಂಗಪ್ರೇಮವನ್ನು ಹೆಚ್ಚಿಸಿತು. ಅದರಿಂದ ಅನೇಕ ನಾಟಕಗಳು, ಹಲವಾರು ಧಾರಾವಾಹಿ– ಸಿನಿಮಾಗಳಲ್ಲಿ ನಟಿಸಲು ಸಾಧ್ಯವಾಯಿತು.

★ *ಕಿರುತೆರೆಯಲ್ಲಿನ ನಿಮ್ಮ ಅನುಭವದ ಬಗ್ಗೆ ಹೇಳುವುದಾದರೆ...*

ಟಿ.ಎನ್.ಸೀತಾರಾಮ್, ನಾಗಾಭರಣ, ಫಣಿರಾಮಚಂದ್ರ ಸೇರಿದಂತೆ ಖ್ಯಾತ ನಿರ್ದೇಶಕರ ಹಲವು ಧಾರಾವಾಹಿಗಳಲ್ಲಿ ಚಿಕ್ಕಪಾತ್ರಗಳಿಂದ ಹಿಡಿದು ಪ್ರಮುಖ ಪಾತ್ರಗಳನ್ನೆಲ್ಲಾ ನಿರ್ವಹಿಸಿದ್ದೇನೆ. ನಿವೃತ್ತಿಯ ನಂತರ ಸ್ವಲ್ಪ ಕಾಲ ಹೈಕೋರ್ಟ್‌ನಲ್ಲಿ ವಕೀಲನಾಗಿಯೂ ಕೆಲಸ ಮಾಡಿದ್ದರಿಂದ ವಕೀಲರ ಪಾತ್ರವನ್ನು ನನಗೇ ಮೀಸಲಿಡುತ್ತಿದ್ದರು. ಚಂದನದಲ್ಲಿ ಪ್ರಸಾರವಾದ ಯಶವಂತ್ ಚಿತ್ತಾಲರ ಕಾದಂಬರಿ ಆಧಾರಿತ 'ಶಿಕಾರಿ' 'ಮಾಯಾಮೃಗ' 'ರಂಗೋಲಿ' 'ಸಾಹಸಲಕ್ಷ್ಮಿಯರು' ಧಾರಾವಾಹಿಗಳಲ್ಲಿನ ನನ್ನ ಅಭಿನಯ ಇನ್ನೂ ಹಸಿರಾಗಿದೆ.

★ *ಅಜ್ಜಯ್ಯನ ಪಾತ್ರ ಹೇಗೆನಿಸುತ್ತದೆ?*

'ಕುಲವಧು'ವಿನ ಕಥೆಯಲ್ಲಿ ಅಜ್ಜಯ್ಯನ ಪಾತ್ರ ಕೂಡ ಬಹುಮುಖ್ಯವಾಗುತ್ತದೆ. ಕಥಾನಾಯಕ ನಿಖಿಲ್‌ಗೆ ಸಹಾಯಕ. ತನ್ನ ಯಜಮಾನನಿಗೆ ಇಷ್ಟದ ಅಡುಗೆ ಮಾಡುವಲ್ಲಿ ನಿಪುಣ. ಕಥಾನಾಯಕ ವೃತ್ತಿಯಿಂದ ವೈದ್ಯ. ಅವನಿಗೆ ಮಾನಸಿಕ ತೊಂದರೆ ಉಂಟಾಗಿದೆ. ರಾಥೋಡ್ ಎಂಬ ಶ್ರೀಮಂತ ಕುಟುಂಬದ ವಂಶಸ್ಥರು. ನಿಖಿಲ್ ತಾಯಿಯ ಮೇಲೆ ಬರುವ ಆರೋಪ. ಅದನ್ನು ಎದುರಿಸುವಾಗ ಉಂಟಾಗುವ ಎಡರು ತೊಡರುಗಳ ನಡುವೆ ಕಥೆ ಸಾಗುತ್ತಿದೆ.

★ *ನೀವು ಮೆಚ್ಚಿದ ನಿಮ್ಮ ನಾಟಕ ಯಾವುದು?*

ಡಾ.ಶಂಕರಶೇಷ ಅವರ ಹಿಂದಿ ನಾಟಕ 'ಕೋಮಲ ಗಾಂಧಾರ'ವನ್ನು ಮ.ಸು.ಕೃಷ್ಣಮೂರ್ತಿ ಕನ್ನಡಕ್ಕೆ ತಂದಿದ್ದಾರೆ. ಅದನ್ನು ನಿರ್ದೇಶಿಸಿ, ಮೂರು ಪಾತ್ರಗಳನ್ನು ನಿರ್ವಹಿಸಿದ್ದೇನೆ. ಭೀಷ್ಮ, ದ್ರೋಣ, ಶಕುನಿಯಾಗಿ ನಾನು ಕಾಣಿಸಿಕೊಂಡಿದ್ದೇನೆ. ಭೀಷ್ಮನ ಪಾತ್ರದ ಬಗ್ಗೆ ಜನ ಹೆಚ್ಚು ಕೊಂಡಾಡುತ್ತಾರೆ. ಕಲಾ ಕ್ಷೇತ್ರದಲ್ಲಿ ಭೀಷ್ಮ ಎಂದೇ ಪ್ರಸಿದ್ಧನಾಗಿದ್ದೆ.

★ *ಕಂಠ ಕಲಾವಿದರಾಗಿದ್ದು ಹೇಗೆ?*

ಕಂಠದಾನವನ್ನು ವೃತ್ತಿಯಾಗಿ ಮಾಡಲಿಲ್ಲ. ಅದು ತೀರಾ ಆಕಸ್ಮಿಕ. ಅಂಧ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಿದ್ಧಪಡಿಸಿದ ಧ್ವನಿ ಸುರುಳಿಗೆ ನಾನು ನೆರವಾದೆ. ಅದರಲ್ಲಿ 'ಶರಣರ ವೈಭವ' 'ಬೈಬಲ್' ಸೇರಿದಂತೆ ಹಲವು ಧ್ವನಿಸುರುಳಿಗಳಿಗೆ ಧ್ವನಿಯನ್ನು ನೀಡಿದ್ದೇನೆ.

★ *ಬಹುಮುಖ ವ್ಯಕ್ತಿತ್ವದ ನಿಮ್ಮಲ್ಲಿ ಯಾರು ಇಷ್ಟವಾಗ್ತಾರೆ?*

ನನಗೆ ನಟನೇ ತುಂಬಾ ಅಚ್ಚುಮೆಚ್ಚು. ಉಸಿರಿರುವ ತನಕ ಬಣ್ಣವನ್ನು ಹಚ್ಚಲು ಬಯಸುತ್ತೇನೆ. ಶ್ರವಣಬೆಳಗೊಳದಲ್ಲಿ ಇತ್ತೀಚೆಗೆ ನಡೆದ ಮಹಾಮಸ್ತಕಾಭಿಷೇಕದಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದ ನೃತ್ಯ ರೂಪಕವನ್ನು ನಿರ್ದೇಶನ ಮಾಡಿದ್ದೆ. ಜೊತೆಗೆ 'ಮರೆಯದ ಮಹಾಶಿಲ್ಪಿ' ಎನ್ನುವ ನಾಟಕವನ್ನು ನಿರ್ದೇಶಿಸಿ ನಟಿಸಿದ್ದೆ. ನನ್ನ ಅಭಿನಯಕ್ಕೆ ತುಂಬಾ ಮೆಚ್ಚುಗೆ ವ್ಯಕ್ತವಾಯಿತು. ಹೀಗಿರುವಾಗ ನಟ ಇಷ್ಟ ಆಗಲೇಬೇಕು.

■ **ರಾಘವೇಂದ್ರ**

